**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 91/2020**

**ಚಾ.ಸಾಃ 15, ಫ್ರಾ.ಸಾಃ 9**

| | |
|---|---|
| ಸಾಕ್ಷಿದಾರನ ಹೆಸರು | ನಾಗರಾಜ ಶೇಟ್ |
| ತಂದೆಯ ಹೆಸರು | ಕೇಶವ ಶೇಟ್ |
| ವಯಸ್ಸು | 35 ವರ್ಷ |
| ಉದ್ಯೋಗ | ಬಂಗಾರದ ಕೆಲಸ |
| ವಾಸ್ತವ್ಯ | ಹೆರವಟ್ಟಾ, ಕುಮಟಾ |

**ಸಾಕ್ಷಿಯನ್ನು ದಿನಾಂಕಃ 19-07-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿರುತ್ತೇನೆ.

2 ನೇ ಆರೋಪಿ ನಮ್ಮ ಅಂಗಡಿಗೆ ಬಂದು ಬಂಗಾರದ ಒಡವೆಗಳನ್ನು ತೆಗೆದುಕೊಂಡು ಹೋಗಲು ಬರುತ್ತಿದ್ದರು, ಆ ಮೂಲಕ ಅವನದು ಗೊತ್ತು. 2020 ರಲ್ಲಿ ಒಂದು ದಿನ 2 ನೇ ಆರೋಪಿ ತನ್ನ ತಂಗಿ ಮದುವೆಗೆ ಮಾಡಿದ್ದ ಸಾಲ ತೀರಿಸಬೇಕು ಎನ್ನುವ ಕಾರಣಕ್ಕೆ ತಂಗಿಯ ಮತ್ತು ತಾಯಿಯ ಒಡವೆಗಳನ್ನು ಗಿರವಿ ಇಟ್ಟುಕೊಂಡು ಹಣ ಕೊಡುವಂತೆ ಕೇಳಿದ್ದರು. ಅದರಂತೆ ಆತ ಸುಮಾರು 73 ಗ್ರಾಂನಷ್ಟು 4 ಐಟಂ ಒಡವೆಗಳನ್ನು ಹಾಜರು ಪಡಿಸಿದ್ದರು. ಸದರಿ ಒಡವೆಗಳನ್ನು ಇಟ್ಟುಕೊಂಡು ಅವರಿಗೆ ಹಣ ಕೊಟ್ಟಿದ್ದೆ. ತದನಂತರ ದಿನಾಂಕ 05-08-2020 ರಂದು ಪೋಲೀಸರು ಫೋನ್ ಮಾಡಿ ಠಾಣೆಗೆ ಕರೆಸಿದ್ದರು. ಠಾಣೆಯಲ್ಲಿ ಆರೋಪಿತರನ್ನು ತೋರಿಸಿ ಇವರು ಕಳುವು ಮಾಡಿದ ಒಡವೆಗಳನ್ನು ನಿಮ್ಮ ಬಳಿ ಗಿರವಿ ಇಟ್ಟಿರುವುದಾಗಿ ಮತ್ತು ಸದರಿ ಒಡವೆಗಳನ್ನು ತಂದುಕೊಡಬೇಕೆಂದು ತಿಳಿಸಿದರು. ಅದರಂತೆ 2 ನೇ ಆರೋಪಿ ನನ್ನ ಬಳಿ ಗಿರವಿ ಇಟ್ಟಿದ್ದ ಬಂಗಾರದ ಒಡವೆಗಳನ್ನು ಪೋಲೀಸ್ ಠಾಣೆಗೆ ತಂದು ಹಾಜರುಪಡಿಸಿರುತ್ತೇನೆ. ಆಗ ಪೋಲೀಸರು ಅವುಗಳನ್ನು ಫೋಟೋ ತೆಗೆದು ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಈಗ ಸಾಕ್ಷಿಯು ಪಂಚನಾಮೆಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಸದರಿ ಜಪ್ತು ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-10 ಎಂದು, ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋದ ದೃಢೀಕೃತ ನಕಲನ್ನು ನೋಡುತ್ತಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ಅಂಗಡಿ ವ್ಯಾಪಾರ ನಾನೇ ಮಾಡುತ್ತೇನೆ, ನಮ್ಮ ತಂದೆ ಮಾಡುವುದಿಲ್ಲ. ಯಾರಾದರೂ ಒಡವೆ ಮಾಡಿಸಿಕೊಳ್ಳಲು ಬಂದರೆ ಒಡವೆ ಮಾಡಿದ್ದರ ಬಗ್ಗೆ ರಸೀದಿ ಕೊಡುತ್ತೇವೆ ಎಂದರೆ ಸರಿ. ನಾವು

ಅಂಗಡಿಯಲ್ಲಿ ಒಡವೆಗಳನ್ನು ಗಿರವಿ ಇಟ್ಟುಕೊಳ್ಳುವುದಿಲ್ಲ. 2 ನೇ ಆರೋಪಿ ಕಷ್ಟ ಅಂತ ಹೇಳಿದ್ದರಿಂದ ಇಟ್ಟುಕೊಂಡಿರುತ್ತೇನೆ. ಗಿರವಿ ಇಟ್ಟುಕೊಂಡ ಬಗ್ಗೆ ನಾನು ಯಾವುದೇ ರಸೀದಿಯನ್ನು ನೀಡಿರುವುದಿಲ್ಲ. 2 ನೇ ಆರೋಪಿ ಯಾವ ಯಾವ ನಮೂನೆ ಮತ್ತು ಎಷ್ಟು ಗ್ರಾಂ ತೂಕದ ಒಡವೆಗಳನ್ನು ನನ್ನ ಬಳಿ ಇಟ್ಟಿದ್ದರು ಎನ್ನುವುದು ನನಗೆ ನೆನಪಿಲ್ಲ. ಎಷ್ಟು ಹಣ ಕೊಟ್ಟಿದ್ದೆ ಎನ್ನುವುದೂ ನೆನಪಿಲ್ಲ. ನಿಪಿ–10 ರಲ್ಲಿ 2 ನೇ ಆರೋಪಿ ಸಹಿ ಇಲ್ಲ ಎಂದರೆ ಸರಿ. ಪೋಲೀಸರು ನನ್ನನ್ನು ಠಾಣೆಗೆ ಕರೆದಿದ್ದರು ಮತ್ತು ನಾನು ಒಡವೆಗಳನ್ನು ಠಾಣೆಯಲ್ಲಿ ಹಾಜರು ಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**